ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಅಧ್ಯಕ್ಷರು, ಆಯ್ಕೆ ಪ್ರಾಧಿಕಾರ ಮತ್ತು ನೇಮಕಾತಿ ಪ್ರಾಧಿಕಾರ ಹಾಗೂ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಮೈಸೂರು ಜಿಲ್ಲೆ. ಮೈಸೂರು.

ದೂರವಾಣಿ ಸಂಖ್ಯೆ:0821-2424079,2422110,2428383

ಫ್ಯಾಕ್ಸ್ ನಂ : 2429012 & 2428383 E-Mail dcofficemysuru@gmail.com

ಸಂಖ್ಯೆ : MYSDC-EST2/VA(15)/1/2019 E-70600 ದಿನಾಂಕ:04/03/2020

## ಅಧಿಕೃತ ಜ್ಞಾಪನ

ವಿಷಯ: 2019-20 ನೇ ಸಾಲಿನಲ್ಲಿ ಗ್ರಾಮಲೆಕ್ಕಿಗರ ನೇಮಕಾತಿ ಸಂಬಂಧ ಅಭ್ಯರ್ಥಿಗಳ ದಾಖಲಾತಿ ಪರಿಶೀಲನೆ ಮಾಡುವ ಬಗ್ಗೆ

ಉಲ್ಲೇಖ:1) ಈ ಕಛೇರಿಯ ಅಧಿಸೂಚನೆ ಸಮಸಂಖ್ಯೆ ದಿನಾಂಕ: 10/07/2019

2) ಈ ಕಛೇರಿಯ ಅಧಿಕೃತ ಜ್ಞಾಪನ ಸಮಸಂಖ್ಯೆ ದಿನಾಂಕ: 08/01/2020

****

2019-20 ನೇ ಸಾಲಿನ ಮೈಸೂರು ಜಿಲ್ಲಾ ಕಂದಾಯ ಘಟಕದ ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಉಲ್ಲೇಖ (1) ರಂತೆ ಅಧಿಸೂಚನೆ ಹೊರಡಿಸಿ ಉಲ್ಲೇಖ (2) ರಂತೆ 1 : 5 ಅನುಪಾತದಲ್ಲಿನ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿನ ಅಭ್ಯರ್ಥಿಗಳ ದಾಖಲಾತಿಗಳನ್ನು ಹಾಜರುಪಡಿಸಲು ದಿನಾಂಕ ನಿಗದಿಪಡಿಸಿ ಆದೇಶಿಸಲಾಗಿದೆ.

ಅದರಂತೆ ಅಭ್ಯರ್ಥಿಗಳ ದಾಖಲಾತಿಗಳನ್ನು ಪರಿಶೀಲಿಸಲು ದಿನಾಂಕ: 18/03/2020 ರಿಂದ 19/03/2020 ರವರೆಗೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಈ ಕೆಳಕಂಡ ಅಧಿಕಾರಿ / ಸಿಬ್ಬಂದಿಯನ್ನು ನೇಮಕಾತಿ ಮಾಡಿ ಆದೇಶಿಸಿದೆ.

| ಕ್ರ.ಸಂ | ಅಧಿಕಾರಿ ಹೆಸರು | ಸಿಬ್ಬಂದಿ ಹೆಸರು | ದಿನಾಂಕ | ತಾತ್ಕಾಲಿಕ ಪರಿಶೀಲನಾ ಪಟ್ಟಿಯ ಕ್ರಮ ಸಂಖ್ಯೆ |
|---|---|---|---|---|
| 1. | ಶ್ರೀ ಸ್ವಾಮಿ ಮುನಿಸಿಪಲ್ ತಹಸೀಲ್ದಾರ್ ಜಿಲ್ಲಾನಗರಾಭಿವೃದ್ಧಿ ಕೋಶ,ಮೈಸೂರು. | 1)ಬದರಿನಾರಾಯಣ ಶಿರಸ್ತೇದಾರ್ 2)ಪವನ್ ಕುಮಾರ್ ಸಿ.ಎಸ್ ಪ್ರ.ದ.ಸ 3)ಶ್ರೀಮತಿ ಕೋಕಿಲ ಎಂ.ಬಿ ಪ್ರ.ದ.ಸ | 18/03/2020 | 01 ರಿಂದ 59 |
| | | | 19/03/2020 | 179 ರಿಂದ 238 |
| 2. | ಶ್ರೀ ಪರಮೇಶ್ ಚುನಾವಣಾ ತಹಸೀಲ್ದಾರ್ | 1)ಎಲ್ ಸುರೇಶ್ ಕುಮಾರ್ ಶಿರಸ್ತೇದಾರ್ 2)ಕಿಶೋರ್, ಪ್ರ.ದ.ಸ 3) ಚಲುವರಾಜ್ ಪ್ರ.ದ.ಸ | 18/03/2020 | 60 ರಿಂದ 118 |
| | | | 19/03/2020 | 239 ರಿಂದ 298 |

| | | | | |
|---|---|---|---|---|
| 3. | ಶ್ರೀ ಎಸ್.ಎನ್,ನರಗುಂದ್ ಶಿಷ್ಠಾಚಾರ ತಹಸೀಲ್ದಾರ್ | 1)ಬೋರಯ್ಯ ಎಂ ಶಿರಸ್ತೇದಾರ್ 2)ಬೋಪಣ್ಣ ಎಂ.ಎಸ್ ,ಪ್ರ.ದ.ಸ 3)ಶ್ರೀ ವಿ.ಮಹೇಶ್ ಪ್ರ.ದ.ಸ | 18/03/2020 | 119 ರಿಂದ 178 |
| | | | 19/03/2020 | 299 ರಿಂದ 350 |

1. ಅಧಿಕಾರಿ / ಸಿಬ್ಬಂಧಿಯವರು ಸಂಬಂಧಪಟ್ಟ ಅಭ್ಯರ್ಥಿಯ ಹಾಜರಾತಿ ಪಡೆದು ನಂತರ ನಿಗಧಿತ ಚಕ್‌ಲಿಸ್ಟ್‌ನಂತೆ ಅಭ್ಯರ್ಥಿಗಳ ಮೂಲ ದಾಖಲಾತಿಗಳನ್ನು ಪರಿಶೀಲಿಸಿ ದ್ವಿಪ್ರತಿಯಲ್ಲಿ ದೃಡೀಕೃತ ಜೆರಾಕ್ಸ್ ಪ್ರತಿ ಪಡೆಯಲು ಸೂಚಿಸಿದೆ.
2. ಪಿಯುಸಿ / ಐಸಿಎಸ್‌ಸಿ / ಸಿಬಿಎಸ್‌ಸಿ ಅಂಕಪಟ್ಟಿ ಮತ್ತು ಪಿಡಿಪಿ / ಪಿಹೆಚ್‌ಪಿ / ಮಾಜಿ ಸೈನಿಕ ದೃಡೀಕರಣ ಪತ್ರಗಳನ್ನು ವಿಶೇಷವಾಗಿ ಪರಿಶೀಲಿಸುವುದು.
3. ಪರಿಶೀಲನೆ ನಂತರ ಮೇಲ್ಕಂಡ ಸಿಬ್ಬಂದಿಯವರಿಂದ ಹಾಜರಾತಿ ಮತ್ತು ದಾಖಲಾತಿಗಳ ಪ್ರತಿಗಳನ್ನು ಗ್ರಾಮ ಲೆಕ್ಕಿಗರ ಶಾಖೆಯ ವಿಷಯ ನಿರ್ವಾಹಕರಿಗೆ ಸಲ್ಲಿಸಲು ಸೂಚಿಸಿದೆ.
4. ಮೇಲ್ಕಂಡ ದಾಖಲಾತಿ ಪರಿಶೀಲನೆ ವೇಳೆಯಲ್ಲಿ ಶ್ರೀ ಆರ್ ಮಂಜುನಾಥ್, ಗ್ರೂಪ್ ಡಿ, ನರಸಿಂಹ, ಗ್ರೂಪ್ ಡಿ ನೌಕರರು ಮತ್ತು ಶ್ರೀ ಮುಸ್ತಾಕ್, ಗ್ರೂಪ್ ಡಿ ನೌಕರರು ಇವರುಗಳು ಹಾಜರಾಗಿ ಸಹಕರಿಸಲು ಸೂಚಿಸಿದೆ.

ಶಿ.ಟಿ.(ಪ್ರ.ವ್ಯಾ)

ಸದಸ್ಯ ಕಾರ್ಯದರ್ಶಿ
ಆಯ್ಕೆ ಪ್ರಾಧಿಕಾರ ಹಾಗೂ ನೇಮಕಾತಿ ಪ್ರಾಧಿಕಾರ,
ಮತ್ತು ಅಪರ ಜಿಲ್ಲಾಧಿಕಾರಿ
ಮೈಸೂರು ಜಿಲ್ಲೆ, ಮೈಸೂರು.

ಪ್ರತಿಯನ್ನು: ಈ ಕೆಳಕಂಡವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಸಲ್ಲಿಸಿದೆ / ಕಳುಹಿಸಿದೆ.

1. ರಾಷ್ಟ್ರೀಯ ಸೂಚನಾ ವಿಜ್ಞಾನಾಧಿಕಾರಿಗಳು, ರಾಷ್ಟ್ರೀಯ ಸೂಚನಾ ವಿಜ್ಞಾನ ಕೇಂದ್ರ, ಜಿಲ್ಲಾ ಪಂಚಾಯತ್, ಮೈಸೂರು ಇವರಿಗೆ ಸದರಿ ಪರಿಶೀಲನಾ ಕಾರ್ಯದ ಸಂಬಂಧ ಹಾಜರಾಗಿ ಸಲಹೆಗಳನ್ನು ನೀಡಲು ಕೋರಿದೆ.
2. ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ಶಾಖೆಗೆ / ಅಪರ ಜಿಲ್ಲಾಧಿಕಾರಿಗಳ ಆಪ್ತ ಸಹಾಯಕ ಶಾಖೆಗೆ
3. ಸಂಬಂಧಪಟ್ಟ ಎಲ್ಲಾ ಅಧಿಕಾರಿ / ಸಿಬ್ಬಂಧಿಯವರಿಗೆ ಸೂಕ್ತ ಕ್ರಮಕ್ಕಾಗಿ
4. ಈ ಕಛೇರಿಯ ಎಂಎಜಿ (1) ಶಾಖೆಗೆ ಕಳುಹಿಸುತ್ತಾ, ಈ ಸಂಬಂಧ ಪರಿಶೀಲನಾ ಕಾರ್ಯಕ್ಕೆ ಅಡಚಣೆಯಾಗದಂತೆ ಪೊಲೀಸ್ ಬಂದೋಬಸ್ತ್ ಒದಗಿಸುವ ಬಗ್ಗೆ ಕ್ರಮವಹಿಸಲು ಸೂಚಿಸಿದೆ.
5. ಈ ಕಛೇರಿಯ ಅಭಿಲೇಖಾಲಯ ಶಾಖೆಗೆ ಪರಿಶೀಲನಾ ಕಾರ್ಯದ ಸಂಬಂಧ ಅವಶ್ಯಕ ಸಾಮಗ್ರಿಗಳನ್ನು ಒದಗಿಸಲು ಸೂಚಿಸಿದೆ.
6. ಈ ಕಛೇರಿಯ ಸಂಬಂಧಪಟ್ಟ ಎಲ್ಲಾ ಸಿಬ್ಬಂಧಿ ವರ್ಗದವರಿಗೆ
7. ಕಛೇರಿ ಪ್ರತಿ.